**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 17/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರಮೋದ್ |
| ತಂದೆಯ ಹೆಸರು | : | ಎ.ಎಸ್. ವೃಷಬೇಂದ್ರ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಉಪ ವಲಯ ಅರಣ್ಯಾಧಿಕಾರಿ, ಮೇಲುಕೋಟೆ ವನ್ಯಜೀವಿ ವಿಭಾಗ. |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕಃ 15.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ದೋಷಾರೋಪಣಾ ಪೂರ್ವ ಮುಖ್ಯ ವಿಚಾರಣೆ: ಸ. ಸ. ಅ.ರವರಿಂದಃ**

ನಾನು ದಿನಾಂಕಃ 01.02.2020 ರಿಂದ ದಿನಾಂಕಃ 15.06.2024 ರವರೆಗೆ ಅರಣ್ಯ ಸಂಚಾರಿ ದಳ, ಮೈಸೂರು ಇಲ್ಲಿ ಉಪ-ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 09.11.2020 ರಂದು ನಾನು ಗಸ್ತು ಕರ್ತವ್ಯದಲ್ಲಿದ್ದಾಗ ನಮ್ಮ ಮೇಲಾಧಿಕಾರಿಗಳು ಅವರಿಗೆ ಬಾತ್ಮೀದಾರರಿಂದ ಹೆಚ್.ಡಿ. ಕೋಟೆಯ ತಾರಕಕ್ಕೆ ಹೋಗುವ ರಸ್ತೆಯಲ್ಲಿರುವ ಪಟ್ಟಾಲಮ್ಮ ದೇವಸ್ಥಾನದ ಬಳಿ ಆರೋಪಿಗಳು ಕಾನೂನು ಬಾಹಿರವಾಗಿ ನಕ್ಷತ್ರ ಆಮೆಗಳನ್ನು ಸಾಗಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿರುವುದಾಗಿ ತಿಳಿಸಿ ಆ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿ ಆ ಪ್ರಕಾರ ನಾನು ಹಾಗು ನಮ್ಮ ಕಛೇರಿ ಸಿಬ್ಬಂಧಿಗಳಾದ ಚಾಸಾ-2 ರಿಂದ ಚಾಸಾ-5 ರವರು ಸದರಿ ಸ್ಥಳಕ್ಕೆ ತಲುಪಿ ಕಾಯುತ್ತಿದ್ದಾಗ ಸಂಜೆ ಸುಮಾರು 05.30 ಗಂಟೆ ಹೊತ್ತಿಗೆ ನಾಗನಹಳ್ಳಿ ಕಡೆಯಿಂದ 01 ಸಿಲ್ವರ್ ಬಣ್ಣದ ಇಂಡಿಕಾ ಕಾರು ಬಂದು ಸದರಿ

ಪಟ್ಟಾಲಮ್ಮ ದೇವಸ್ಥಾನದ ಮುಂಭಾಗ ನಿಂತಿದ್ದು ಸದರಿ ಕಾರನಿಂದ ಚಾಲಕನು ಕೆಳಗಿಳಿದು ಕಾಯುತ್ತಿದ್ದು ಆಗ ಸ್ವಲ್ಪ ಹೊತ್ತಿಗೆ 01 ರಾಯಲ್ ಎನಫೀಲ್ಡ್ ಬೈಕ್ ನಲ್ಲಿ ಇಬ್ಬರು ಆಸಾಮಿಗಳು ತಮ್ಮ ನಡುವೆ 01 ಪ್ಲಾಸ್ಟಿಕ್ ಬಕೇಟ್ ಅನ್ನು ಇಟ್ಟುಕೊಂಡು ಸದರಿ ಪಟ್ಟಾಲಮ್ಮ ದೇವಸ್ಥಾನದ ಬಳಿ ಬಂದು ಅಲ್ಲಿ ನಿಂತಿದ್ದ ಸದರಿ ಇಂಡಿಕಾ ಕಾರ್ ನ ಬಳಿಗೆ ಬಂದು ಬಕೇಟ್ ಅನ್ನು ಕಾರಿನ ಬಳಿ ಇಟ್ಟುಕೊಂಡು ಸದರಿ ಕಾರಿನ ಚಾಲಕನೊಂದಿಗೆ ಮಾತನಾಡುತ್ತಿದ್ದಾಗ ನಾವು ಅನುಮಾನಗೊಂಡು ಸದರಿ ಇಂಡಿಕಾ ಕಾರನ್ನು ಪರಿಶೀಲಿಸಲು ಮುಂದಾದಾಗ ಸದರಿ ಆಸಾಮಿಗಳು ನಮ್ಮನ್ನು ನೋಡಿ ಗಾಬರಿಗೊಂಡು ಓಡಲು ಪ್ರಯತ್ನಿಸಿರುತ್ತಾರೆ. ಆಗ ನಾನು ಹಾಗು ನಮ್ಮ ಸಿಬ್ಬಂಧಿಗಳು ಅವರುಗಳನ್ನು ಸುತ್ತುವರೆದು ಹಿಡಿದುಕೊಂಡು ಸದರಿ ಇಂಡಿಕಾ ಕಾರನ್ನು ಪರಿಶೀಲಿಸಲಾಗಿ ಅದರ ಮುಂಭಾಗದ ಎಡ ಸೀಟ್ ನ ಮುಂಭಾಗ 01 ಬಿಳಿ ಬಣ್ಣದ ಪ್ಲಾಸ್ಟಿಕ್ ಬಕೇಟ್ ಇದ್ದು ಅದರಲ್ಲಿ ಅರ್ಧದಷ್ಟು ನೀರು ಇದ್ದು ಅದರಲ್ಲಿ ಹಸಿರು ಪಂಚೆಯನ್ನು ಸುತ್ತಿಟ್ಟಿರುವುದು ಕಂಡುಬಂದಿರುತ್ತದೆ. ಸದರಿ ಸುತ್ತಿಟ್ಟಿದ್ದ ಪಂಚೆಯನ್ನು ಬಿಡಿಸಿ ನೋಡಲಾಗಿ ಅದರಲ್ಲಿ ಒಂದು ಜೀವಂತ ನಕ್ಷತ್ರ ಆಮೆ ಇರುವುದು ಕಂಡು ಬಂದಿರುತ್ತದೆ. ನಂತರ ಸದರಿ ಆಸಾಮಿಗಳ ಬಳಿ ಸದರಿ ಆಮೆಯನ್ನು ಸಾಗಾಟ ಮಾಡಲು ಪರವಾನಗಿ ಇದೆಯೇ ಎಂದು ಕೇಳಲಾಗಿ ಆರೋಪಿಗಳು ಆ ರೀತಿ ಯಾವುದೇ ಪರವಾನಗಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಆ ರೀತಿ ಸಾಗಾಟವು ವನ್ಯಜೀವಿ ಕಾಯಿದೆ ಅಡಿ ಅಪರಾಧವಾದ್ದರಿಂದ ಸದರಿ ಆಮೆ, ಬಕೇಟ್ ಹಾಗು ಹಸಿರು ಬಣ್ಣದ ಪಂಚೆಯನ್ನು ಅಮಾನತ್ತುಪಡಿಸಿಕೊಳ್ಳಲು ತೀರ್ಮಾನಿಸಿ ಸ್ಥಳದಲ್ಲಿಯೇ ಮಹಜರ್ ಕ್ರಮ ಜರುಗಿಸಿ ಆರೋಪಿಗಳ ವಶದಲ್ಲಿದ್ದ ಸದರಿ ನಕ್ಷತ್ರ ಆಮೆ ಮತ್ತು ಸದರಿ ಆಸಮೆಯನ್ನು ಶೇಖರಿಸಿಡಲು ಬಳಿಸಿದ್ದ ಬಿಳಿ ಬಣ್ಣದ ಬಕೇಟ್, ಹಸಿರು ಬಣ್ಣದ ಪಂಚೆ ಹಾಗು ಅದನ್ನು ಸಾಗಾಟ ಮಾಡಲು ಬಸಸಿದ ಕೆಎ 51 ಡಿ 1681 ನೋಂದಣಿ ಸಂಖ್ಯೆಯ ಇಂಡಿಕಾ ಕಾರು

ಹಾಗು ಕೆಎ 41 ಇಪಿ 8529 ನೋಂದಣಿ ಸಂಖ್ಯೆಯ ರಾಯಲ್ ಎನ್ ಫೀಲ್ಡ್ ಕಾರನ್ನು ಹಾಗು ಆರೋಪಿಗಳ ವಶದಲ್ಲಿದ್ದ 04 ಮೊಬೈಲ್ ಗಳನ್ನು ಇಲಾಖಾ ಪರ ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಮಹಜರ್ ಅನ್ನು ಸಂಜೆ 05.70-07.00 ಗಂಟೆಯವರೆಗೆ ಜರುಗಿಸಲಾಯಿತು. ನಂತರ ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳು ಹಾಗು ಆರೋಪಿಗಳೊಂದಿಗೆ ಕಛೇರಿಗೆ ಹಿಂತಿರುಗಿ ಅರಣ್ಯ ಮೊಕದ್ದಮೆ ಸಂಖ್ಯೆ: 28/2020-2021 ರಂತೆ ಪ್ರಕರಣ ದಾಖಲಿಸಿ ನಂತರ ಆರೋಪಿಗಳನ್ನು ಹಾಗು ಮಾಲುಗಳನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿ ಕಡತವನ್ನು ಹಸ್ತಾಂತರಿಸಿರುತ್ತೇನೆ. ನಂತರ ದಸ್ತಗಿರಿ ಮಾಡಿದ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಮೇಲೆ ಹೇಳಿದಂತೆ ಕೃತ್ಯ ಸ್ಥಳದಲ್ಲಿ ಜರುಗಿಸಿದ ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಮಹಜರ್ ಅನ್ನು **ನಿ.ಪಿ.-1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-1(ಎ)** ಎಂದು ಗುರುತಿಸಲಾಯಿತು. ಅರಣ್ಯ ಮೊಕದ್ದಮೆ ಸಂಖ್ಯೆ ಎಫ್.ಒ.ಸಿ./28-2020-2021 ರ ಪ್ರಥಮ ವರ್ತಮಾನ ವರದಿಯನ್ನು **ನಿ.ಪಿ.-2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-2(ಎ)** ಎಂದು ಗುರುತಿಸಲಾಯಿತು. ಮಾಲುಪಟ್ಟಿಯನ್ನು **ನಿ.ಪಿ.-3** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-3(ಎ)** ಎಂದು ಗುರುತಿಸಲಾಯಿತು. ನಂತರ ದಿನಾಂಕಃ 04.08.2021 ರಂದು ತನಿಖಾಧಿಕಾರಿಗಳು ನ್ಯಾಯಾಲಯದ ಆದೇಶದ ಮೇರೆಗೆ ನನ್ನ, ಚಾಸಾ-3 ಹಾಗು ಕಛೇರಿ ಸಿಬ್ಬಂಧಿಯಾದ ವಿನೋದ್ ಕುಮಾರ್ ರವರ ಸಮಕ್ಷಮ ಮಧ್ಯಾಹ್ನ 12.30-01.15 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಕೆಎ 41 ಇಪಿ8529 ನೋಂದಣಿ

ಸಂಖ್ಯೆಯ ರಾಯಲ್ ಎನ್ ಫೀಲ್ಡ್ ಬೈಕ್ ಅನ್ನು ಅದರ ಮಾಲೀಕರಿಗೆ ಬಿಡುಗಡೆ ಮಾಡಿರುತ್ತಾರೆ. ಸದರಿ ಮಹಜರ್ ಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸದರಿ ಮಹಜರ್ ಅನ್ನು **ನಿ.ಪಿ.-4** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-4(ಎ)** ಎಂದು ಗುರುತಿಸಲಾಯಿತು. ನಂತರ ದಿನಾಂಕಃ 18.09.2021 ರಂದು ತನಿಖಾಧಿಕಾರಿಗಳು ನನ್ನನ್ನು ಹಾಗು ಚಾಸಾ-7 ರವರನ್ನು 2 ನೇ ಆರೋಪಿಯ ಹೇಳಿಕೆಯ ಆಧಾರದ ಮೇಲೆ ಸದರಿ ಆಮೆಯನ್ನು ಹಿಡಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಮಧ್ಯಾಹ್ನ 03.30 ಗಂಟೆಯಿಂದ ಸಂಜೆ 04.30 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಸದರಿ ಮಹಜರ್ ಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸದರಿ ಮಹಜರ್ ಅನ್ನು **ನಿ.ಪಿ.-5** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-5(ಎ)** ಎಂದು ಗುರುತಿಸಲಾಯಿತು. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳು ಗೈರು ಹಾಜರಾಗಿದ್ದು, ಅವರ ಪರ ವಕೀಲರು ಹಾಜರಾತಿ ವಿನಾಯಿತಿಯ ಅರ್ಜಿಯನ್ನು ಸಲ್ಲಿಸಿದ್ದು ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸ.ಸ.ಅ. ಮುದ್ದೆಮಾಲುಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.**
**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**